**CCE PF**
**CCE PR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2017**

**S. S. L. C. EXAMINATION, MARCH / APRIL, 2017**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 05. 04. 2017 ] **ಸಂಕೇತ ಸಂಖ್ಯೆ : 33-K**

Date : 05. 04. 2017 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh + Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 14 × 1 = 14 |
| 1. | ಪ್ರಾಣಿಗಳನ್ನು ಸುಲಭವಾಗಿ ಕೊಲ್ಲಲು ವಿಷ ಸವರಿದ ಬಾಣಗಳನ್ನು ಸಿದ್ಧಪಡಿಸಿಕೊಳ್ಳುವುದು ಬೇಡನ ಉಪಾಯವಾಗಿತ್ತು. | |
| 2. | ಶ್ರದ್ಧೆ, ಸತತ ಪರಿಶ್ರಮ ಮತ್ತು ಏಕಾಗ್ರತೆ, ಚುರುಕುತನ, ಅರ್ಪಣಾ ಮನೋಭಾವಗಳು ಸಾಧನೆಗೆ ಅವಶ್ಯಕವಾದುದು. | |
| 3. | ತನ್ನಂತಹ ಕಣ್ಣು ಕಳೆದುಕೊಂಡ ಸಹಸ್ರಾರು ನತದೃಷ್ಟರ ಬದುಕನ್ನು ಸುಂದರಗೊಳಿಸಲು ಕಾರಣವಾಯಿತು ಹೀಗಾಗಿ ಅಂಧತ್ವ ಪುಟ್ಟರಾಜರ ಪಾಲಿಗೆ ದುರಂತವಾಗಲಿಲ್ಲ. | |
| 4. | ರೇಶನ್ ಪದ್ಧತಿಯ ಪ್ರಕಾರ ಸರ್ಕಾರದ ಅನುಮತಿ (ಪರವಾನಗಿ) ಇಲ್ಲದೆ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಅಕ್ಕಿ ಮತ್ತು ಸಕ್ಕರೆಯನ್ನು ಒಯ್ಯುವಂತಿರಲಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 5. | ಲೇಖಕರ ಅಜ್ಜ ಶಿಕ್ಷಕ ವೃತ್ತಿಯಲ್ಲಿದ್ದರು. | |
| 6. | ಕಾಯಿದೆಗಿಂತ ಹೃದಯದಲ್ಲಿದ್ದ ಪ್ರೀತಿಯೇ ಮುಖ್ಯವಾದುದರಿಂದ ಅಜ್ಜ ಕಾಯಿದೆಯನ್ನು ಮೀರಿದರು. | |
| 7. | ಶಿಷ್ಯರು ತಾವು ಕಂಡುಹಿಡಿದ ವಿಷಯಗಳನ್ನು ಇತರರಿಗೆ ಮನದಟ್ಟು ಮಾಡುವ ಸಾಮರ್ಥ್ಯವನ್ನು ಪಡೆಯಬೇಕೆಂದು ವಾರವಾರವೂ ವ್ಯಾಸಂಗ ಗೋಷ್ಠಿಗಳನ್ನು ಏರ್ಪಡಿಸುತ್ತಿದ್ದರು. | |
| 8. | ಬನದ ಗೋಪಾಲ ಶ್ರೀಕೃಷ್ಣ. | |
| 9. | ಅಸಹಾಯಕ ಹೆಣ್ಣುಮಗಳು ಮೈಯನ್ನು ಮುಟ್ಟಿಕೊಂಡಾಗ ತನ್ನ ಇರುವಿಕೆಯ ಅರಿವಾಗದಿದ್ದಾಗ ಗಾಬರಿಯಾಗುತ್ತದೆ. | |
| 10. | ಬಾಹುಬಲಿ ಬೆಟ್ಟದ ಮೇಲಿದ್ದು ಹತ್ತಿರದಲ್ಲಿ ಯಾರೂ ಇಲ್ಲದಿರುವುದರಿಂದ ಭಯವಾಗುವುದಿಲ್ಲವೆ ಎಂದು ಮಗು ಕೇಳಿತು. | |
| 11. | ತಿಮಿರಕ್ಕೆ ವೈರಿ ಬೆಳಕು. | |
| 12. | ಜನಪದ ತ್ರಿಪದಿಯಲ್ಲಿ ಹೆಣ್ಣಿದ್ದ ಮನೆಗೆ ಕನ್ನಡಿ ಬೇಡವೆಂದು ಹೇಳಿದ್ದಾರೆ. | |
| 13. | ವೇಷ ಧರಿಸಿದ ಮೇಲೆ ವೇಷದಂತೆ ಆಚರಣೆಯೂ ಪರಿಶುದ್ಧವಾಗಿರಬೇಕು. | |
| 14. | ಕೌರವನ ಭಯಂಕರವಾದ ಸ್ಸೈನ್ಯವನ್ನು ಕಂಡ ಉತ್ತರನು ನಿಟ್ಟೋಟದಲ್ಲಿ ಓಡಿದನು. | |
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | $15 \times 2 = 30$ |
| 15. | ರಾಹುಲ್ ದ್ರಾವಿಡರು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನೂ ನಿಭಾಯಿಸುವ, ವಿಕೆಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್‌ಗಳಿಸುವ, ಅದ್ವಿತೀಯ ಬ್ಯಾಟಿಂಗ್ ಶೈಲಿಯಿಂದ ಇಡೀ ದಿನ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದು. ಇದೇ ಕಾರಣಕ್ಕೆ ಇವರು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರಾಗಿದ್ದರು. | |
| 16. | ಆರು ತಿಂಗಳ ಮಗುವಾಗಿರುವಾಗಲೇ ದೃಷ್ಟಿಯನ್ನು ಕಳೆದುಕೊಂಡ ಪುಟ್ಟರಾಜರು ಮತ್ತೆ ಕೆಲವೇ ತಿಂಗಳುಗಳಲ್ಲಿ ತಂದೆ ತಾಯಿಯನ್ನು ಕಳೆದುಕೊಂಡು ವಸ್ತುತಃ ನಿರ್ಗತಿಕರೇ ಆದರು. ತಮ್ಮ ಅಳಿಯನ ಸೂಕ್ಷ್ಮಮತಿ, ಕಲಿಕೆಯಲ್ಲಿಯ ಏಕಾಗ್ರತೆಯನ್ನು ಕಂಡು ಚಂದ್ರಶೇಖರಯ್ಯ ಅವರು ಪುಟ್ಟರಾಜರನ್ನು ಪಂಚಾಕ್ಷರಿ ಗವಾಯಿಗಳಿಗೆ ಒಪ್ಪಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 17. | ಎಲ್ಲೆಯಿರದ ಸೇವಾಕ್ಷೇತ್ರ ಇವರದಾಗಿದ್ದರೂ ಸರಳಜೀವಿ, ಸಂಗೀತ ಲೋಕವನ್ನು ತಮ್ಮ ಹೊಸ ಹೊಸ ರಾಗಗಳಿಂದ ಶ್ರೀಮಂತಗೊಳಿಸಿದ ವಾಗ್ಗೇಯಕಾರ, ವಾದ್ಯ ಪ್ರವೀಣ, ಶ್ರೇಷ್ಠ ಸಾಹಿತಿ, ಸಮಾಜ ಚಿಂತಕ, ನಾಟಕರಂಗವಿಹಾರಿ, ಶೈಕ್ಷಣಿಕ ಕ್ಷೇತ್ರದ ಸಾಧಕ, ಆಧ್ಯಾತ್ಮಿಕ ಗುರು. ಇದು ಪುಟ್ಟರಾಜರ ಸಂಕ್ಷಿಪ್ತ ಪರಿಚಯ. | |
| 18. | ಪಶ್ಚಿಮ ಘಟ್ಟಗಳಿಂದ ಹರಿದು ಬಂದ ನದಿಯೇ ನೀವಿದ್ದಲ್ಲಿ ಬೆಳಕು ಹರಿಸುತ್ತದೆ. ಹೊರಗೆ ಸುರಿಯುವ ಜಡಿಮಳೆ ತೇವತುಂಬಿದ ಗಾಳಿಗೆ ಈ ಘಟ್ಟಗಳೇ ಕಾರಣ. ನಾವು ಕುಡಿಯುವ ಕಾಫಿ, ಕಾಫಿಪುಡಿ ಪಶ್ಚಿಮ ಘಟ್ಟದ್ದೆ. ಕಾಫಿ ಕುಡಿಯುವ ಸ್ಟೀಲ್ ಲೋಟ ಪಶ್ಚಿಮ ಘಟ್ಟದ ಖನಿಜವೇ. ಲವಂಗ, ಏಲಕ್ಕಿ ಮಿಶ್ರಿತ ಸುವಾಸನೆ ಅಡಿಕೆ ಪುಡಿ, ಬೆತ್ತದ ಕುರ್ಚಿ, ನಾವು ಓದುವ ಪುಸ್ತಕ ಹೀಗೆ ಪಶ್ಚಿಮ ಘಟ್ಟಗಳ ಉತ್ಪನ್ನಗಳು ನಮ್ಮ ದಿನನಿತ್ಯದ ಬದುಕಿಗೆ ಸಹಕಾರಿಯಾಗಿವೆ. | |
| 19. | ಗುರು ಮತ್ತು ಶಿಷ್ಯರ ಮಧ್ಯೆ ನಡೆದ ಘಟನೆ ಮತ್ತು ಸಂಭಾಷಣೆ ಲೇಖಕರಾದ ಗುರುರಾಜ ಕರಜಗಿಯವರ ಮನದಲ್ಲಿ ಅಚ್ಚಳಿಯದೆ ನಿಂತಿದೆ. ಒಂದೆಡೆ ಕೃತಜ್ಞನಾದ ವಿದ್ಯಾರ್ಥಿ ಇನ್ನೊಂದೆಡೆ ಕೃತಾರ್ಥನಾದ ಗುರು ಇಬ್ಬರೂ ಅಳುತ್ತ ಒಬ್ಬರನ್ನೊಬ್ಬರು ಅಪ್ಪಿಕೊಂಡ ರೀತಿ, ಸಾರ್ಥಕ ಶಿಕ್ಷಕತ್ವದ ಹೆಗ್ಗುರುತು. ಇದು ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ನೊಬೆಲ್ ಪ್ರಶಸ್ತಿ. ಈ ಘಟನೆ ಮತ್ತು ಇಂದಿನ ವ್ಯವಸ್ಥೆಯನ್ನು ಗಮನಿಸಿದ ಲೇಖಕರು ಬೇಂದ್ರೆಯವರ 'ಎಲ್ಲಿ ಹೋಗ್ಯಾವೋ ಗೆಳೆಯ ಆ ಕಾಲ' ಎಂಬ ಮಾತನ್ನು ನೆನಪಿಸಿಕೊಂಡರು. | |
| 20. | ರಾಮನ್ನರಿಗೆ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಮುಖ್ಯವಾಗುತ್ತಿರಲಿಲ್ಲ. ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿದ್ದಾನೆಯೇ, ಅವನ ಬುದ್ಧಿ ಹರಿತವಾಗಿದೆಯೇ, ಅವನಲ್ಲಿ ಉತ್ಸಾಹ ತುಂಬಿದೆಯೇ ಕಷ್ಟಪಟ್ಟು ಕೆಲಸ ಮಾಡುವ ದೃಢ ನಿಶ್ಚಯ ಅವನಲ್ಲಿ ಕಾಣುವುದೇ ಎಂದೆಲ್ಲ ಒರೆಹಚ್ಚಿ ನೋಡಿ ಅವನನ್ನು ಪ್ರಶ್ನಿಸಿ ಅವನ ತೂಕ ಎಷ್ಟೆಂದು ಗುರುತಿಸಿ ನಂತರವೇ ಆಯ್ಕೆ ಮಾಡುತ್ತಿದ್ದರು. | |
| 21. | ಬನದಲ್ಲಿರುವ ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು ಪರ್ವತ ಬಾಳೆಯ ಹೂವು, ಗೋರಂಟಿಯ ಹೂವುಗಳು, ಸಾವಿರಾರು ಮಳೆ ಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು. ಆ ಮೇಲೆ ಹಕ್ಕಿಗಳ ಇಂಪಾದ ಗಾನ! ತಂಗಾಳಿ! ಸೂರ್ಯದೇವನ ಹೊಂಬೆಳಕು! ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮ ಮಣಿಗಳು ಮಿರುಗುವ ಲೀಲೆ! ಇವುಗಳನ್ನು ಕಂಡು ಸಂತೋಷಗೊಂಡ ಮಗು ತಾಯಿ ಜೊತೆಗಿದ್ದರೆ ಬನವೇ ಸೊಗಸು ಎಂದಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಧರ್ಮ, ಸಂಪ್ರದಾಯ, ಕಟ್ಟುಪಾಡುಗಳ ಹೆಸರಿನಲ್ಲಿ ಅಡುಗೆ ಕೋಣೆಯಲ್ಲಿ ದಿನವಿಡೀ ದುಡಿದ ಮುಗ್ಧ ಹೆಣ್ಣು ಮಗಳೊಬ್ಬಳಿಗೆ ತನ್ನ ಇರುವಿಕೆಯ ಅರಿವಾಗದೇ ಹೋದಾಗ ಅಂತರಾತ್ಮವು ಕಿರುಚಿಕೊಳ್ಳುತ್ತದೆ. | |
| 23. | ಬಾಹುಬಲಿಯು ದುಗ್ಧಹಾಸದಲ್ಲಿ ನಲಿವ ಮುಗ್ಧ ಮಗುವಿನಂತಿದ್ದಾನೆ. ತನಗನಿಸಿದ್ದನ್ನು ನಿರ್ಭಯವಾಗಿ ಹೇಳುವ ಮುಗ್ಧತೆ ಮಗುವಿನಲ್ಲಿದೆ. ಬಾಹುಬಲಿ ಮತ್ತು ಮಗುವಿನಲ್ಲಿ ಯಾವುದೇ ಸ್ವಾರ್ಥ ಮತ್ತು ಅಹಂಕಾರಗಳಿಲ್ಲ. ಆದ್ದರಿಂದ ಕವಿ ಬಾಹುಬಲಿಯೂ ಮಗುವೂ ಒಂದೇ ಎಂದು ಹೇಳಿದ್ದಾರೆ. | |
| 24. | ತಟ್ಟೆಯಲ್ಲಿ ಕರ್ಪೂರ ಮೌನವಾಗಿ ಉರಿಯುವ ರೀತಿ, ದೀಪದ ಎದುರಿಗೆ ಕತ್ತಲೆಯು ಸರಿಯುವಂತೆ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಸದ್ದುಗದ್ದಲವಿಲ್ಲದೆ ಶಾಂತಿಯಿಂದ ಮಾಡಬೇಕೆಂದು ಸಿ.ಪಿ.ಕೆ.ಯವರು ಹೇಳಿದ್ದಾರೆ. | |
| 25. | ಮಾನವನಲ್ಲಿ ದೈವತ್ವವನ್ನು, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರರ ಹಿತಕ್ಕಾಗಿ ಕರ್ತವ್ಯಪರರಾಗ ಬೇಕು. ಸ್ವಾರ್ಥದ ಜೊತೆ ಜೊತೆಯಲ್ಲಿ ಪರಾರ್ಥದಲ್ಲೂ ಜೀವನ ಸಾರ್ಥಕ್ಯವನ್ನು ಕಾಣಬೇಕು. ಪರಹಿತವನ್ನು ಬಯಸುತ್ತಾ, ಪರೋಪಕಾರವನ್ನು ಮಾಡುವುದು ನಮ್ಮ ಜೀವನದ ಗುರಿಯಾಗಬೇಕು. | |
| 26. | ಜನಪದರಿಗೆ ಮಕ್ಕಳೆಲ್ಲರೂ ಸಮಾನರು. ಗಂಡು ಹೆಣ್ಣೆಂಬ ಭೇದವಿಲ್ಲ. ಕುಟುಂಬ ವ್ಯವಸ್ಥೆಯಲ್ಲಿ ಇಬ್ಬರೂ ಮುಖ್ಯ. ಆದುದರಿಂದಲೇ ಹೆಣ್ಣು ನೆರಮನೆಯ ಸಿರಿದೇವಿಯಾಗಿ ಬಾಳಿದರೆ, ಗಂಡು ಮಗು ಮನೆಗೆ ತೊಲೆಗಂಬ ಹೇಗೆ ಆಶ್ರಯವಾಗಿರುವುದೊ ಹಾಗೆ ತನ್ನ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊರುತ್ತಾನೆ. ಹೀಗೆ ಮಕ್ಕಳು ತನ್ನ ಅಪ್ಪಯ್ಯನಿಗೆ ಹೆಸರು ತರುತ್ತಾರೆ. | |
| 27. | ಶತ್ರು ಸೈನ್ಯಕ್ಕೆ ಹೆದರಿದ ಉತ್ತರನು ಯುದ್ಧರಂಗದಿಂದ ಓಡಿಹೋದ ಪಾಪ ಪ್ರಾಯಶ್ಚಿತ್ತಕ್ಕಾಗಿ, ಭೂಸರರು ಅಶ್ವಮೇಧ ಯಾಗವನ್ನು ಮಾಡುವುದನ್ನು ಪ್ರತ್ಯಕ್ಷವಾಗಿಯೇ ನೋಡಬಹುದು, ಸುರರ ಸತಿಯರನ್ನು ನಮ್ಮ ಅರಮನೆಯ ನಾರಿಯರಲ್ಲೆ ಕಾಣಬಹುದು. ಇಂದ್ರಪದವಿಗಿಂತ ನಮ್ಮ ಅರಮನೆಯ ಪದವಿಯೇ ಸಾಕು. ಯುದ್ಧವನ್ನು ಮಾಡದೆಯೇ ಸುಖವನ್ನು ಪಡೆಯಬಹುದೆಂದು ಉತ್ತರನು ಹೇಳಿದನು. | |
| 28. | ಲೇಖಕರಾದ ಬೆಳಗೋಡು ರಮೇಶ್ ಭಟ್ ಅವರಿಗೆ ಒಂದೆರಡು ಬಾರಿ ನಿಮಿತ್ಯ ಹೇಳುವ ಅವಕಾಶ ಸಿಕ್ಕಿತ್ತು. ಆದರೆ ಅವರು ಹೇಳುವ ಮಾತುಗಳೆಂದರೆ ಒಂದು ರೀತಿಯ ಕೌನ್ಸಿಲಿಂಗ್ ಅಷ್ಟೇ ತನ್ನ ಅಕ್ಕನಿಂದ ಅನ್ನಪೂರ್ಣೆಯ ವಿಚಾರ ತಿಳಿದಿದ್ದ ಲೇಖಕರು ಜೋಯಿಸರ ಕುರ್ಚಿಯಲ್ಲಿ ಕುಳಿತು ಕವಡೆಯನ್ನು ತೋರಿಸಿ ನೋಡಮ್ಮ ನಿಮ್ಮ ಮನೆಯಲ್ಲಿ ದುಃಖಿಯಾಗಿ ಕುಳಿತಿರುವ ಹೆಣ್ಣುಮಗುವನ್ನು ಸಂತೋಷದಲ್ಲಿಡಿ, ಅದಕ್ಕೆ ಸಲ್ಲಬೇಕಾದುದನ್ನು ಕೊಡಿ. ನಿಮಗೆ ಸಲ್ಲಬೇಕಾದುದನ್ನು ದೇವರು ಕೊಡುತ್ತಾನೆ ಎಂದು ಹೇಳಿ ತಾಯಿ ಇಲ್ಲದ ಹೆಣ್ಣು ಮಗಳೊಬ್ಬಳಿಗೆ ಸುಖ, ಸಂತೋಷ ಸಿಗುವಂತೆ ಮಾಡಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ತನ್ನ ತಾಯಿಯ ಮನೆಯಲ್ಲಿ ಅಡುಗೆ ಮಾಡಿ ಅಭ್ಯಾಸವಿಲ್ಲದ ಸಾವಿತ್ರಿ ಸೌತೆಕಾಯಿಯ ಕಹಿಯನ್ನು ಗಮನಿಸದೆ ಅಡುಗೆ ಮಾಡಿದ್ದಳು. ಸಾಂಬಾರಿನಲ್ಲಿರುವ ಕಹಿಯನ್ನು ಗಮನಿಸಿದ ಮನೆಯವರು ಮೊಸರು ಮಜ್ಜಿಗೆಯಿಂದ ಊಟ ಮುಗಿಸಿದರು. ಇದರಿಂದ ಮನನೊಂದ ಸಾವಿತ್ರಿ ನಡೆದ ಘಟನೆಯನ್ನು ತನ್ನ ಪತಿಗೆ ಹೇಳಲು ಎರಡನೆಯ ಬಾರಿ ದೂರವಾಣಿಯ ಕಡೆಗೆ ಹೋದಳು. | |
| 30. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು)<br>ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ.<br>**ಅಥವಾ**<br>ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು. | 1 × 3 = 3 |
| | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | *ಕುವೆಂಪು :*<br>ರಾಷ್ಟ್ರಕವಿ ಕುವೆಂಪುರವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಎಂಬಲ್ಲಿ ೧೯೦೪ ರಲ್ಲಿ ಜನಿಸಿದರು. ಇವರು ಬೊಮ್ಮನಹಳ್ಳಿ ಕಿಂದರಜೋಗಿಯಿಂದ ಹಿಡಿದು ಮಹಾಕಾವ್ಯ ಶ್ರೀರಾಮಾಯಣ ದರ್ಶನಂವರೆಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳು ನವಿಲು, ಬೆರಳ್‌ಗೆ ಕೊರಳ್, ಮಲೆಗಳಲ್ಲಿ ಮದುಮಗಳು ಮುಂತಾದವು. ಜ್ಞಾನಪೀಠ, ಕರ್ನಾಟಕ ರತ್ನ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 32. | *ಕುಮಾರ ವ್ಯಾಸ :* | |
| | ಕುಮಾರ ವ್ಯಾಸರವರು ಗದುಗಿನ ಕೋಳಿವಾಡದಲ್ಲಿ ೧೪೩೦ ರಲ್ಲಿ ಜನಿಸಿದರು. ಇವರು 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕೃತಿ ರಚಿಸಿದ್ದಾರೆ. ಇದಕ್ಕೆ 'ಗದುಗಿನ ಭಾರತ'ವೆಂಬ ಹೆಸರೂ ಇದೆ. ತಮ್ಮ ಕಾವ್ಯದಲ್ಲಿ 'ರೂಪಕಾಲಂಕಾರ'ವನ್ನು ಬಹಳವಾಗಿ ಬಳಸಿರುವುದರಿಂದ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದಿನಿಂದ ಕರೆಯುತ್ತಾರೆ. | |
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | 4 × 3 = 12 |
| | ಕೃತಿ, ಕರ್ತೃ, ಪಠ್ಯ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 33. | *"ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."* | |
| | ಈ ವಾಕ್ಯವನ್ನು ಅ.ರಾ. ಮಿತ್ರ ಅವರು ಬರೆದ 'ಮಹಾಭಾರತ (ವ್ಯಾಸ) ಪಾತ್ರ ಸಂಗತಿಗಳು' ಎಂಬ ಕೃತಿಯಿಂದ ಆರಿಸಿದ 'ಒಣಮರದ ಗಿಳಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ. | |
| | ದೇವರಾಜ ಇಂದ್ರನು "ಏನಾದರೂ ವರವನ್ನು ಕೇಳು ಕೊಡುತ್ತೇನೆ" ಎಂದು ಗಿಳಿಗೆ ಹೇಳಿದಾಗ ಗಿಳಿ "ದೇವರಾಜ ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರಕ್ಕೆ ಮೊದಲಿನಂತೆ ಹಸಿರಿನಿಂದ ಕಳಕಳಿಸುವ, ಫಲಪುಷ್ಪ ಭಾರದಿಂದ ಬೀಗುವ ನೆರಳುಕೊಡುವ ವರವನ್ನು ದಯಪಾಲಿಸು" ಎಂದು ದೇವೇಂದ್ರನನ್ನು ಕೇಳಿತು. ಗಿಳಿಯ ಪರೋಪಕಾರ ಗುಣವನ್ನು ಇಲ್ಲಿ ಕಾಣಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | *“ನಿನ್ನಲ್ಲಿ ಹತ್ತು ಕಿಲೋವಾಟ್ ಶಕ್ತಿಯ ಬುದ್ಧಿಯಿದೆ”*<br>ಈ ವಾಕ್ಯವನ್ನು ಬಿ. ಪುಟ್ಟಯ್ಯ ರಾಧಾಕೃಷ್ಣ ಅವರ ‘ಸಿ.ವಿ. ರಾಮನ್’ ಎಂಬ ಕೃತಿಯಿಂದ ಆಯ್ದ ‘ಶಿಷ್ಯವತ್ಸಲ ರಾಮನ್’ ಎಂಬ ಗದ್ಯಪಾಠದಿಂದ ಆರಿಸಿಕೊಂಡಿದೆ.<br>ಈ ಮಾತನ್ನು ರಾಮನ್ ಅವರು ತಮ್ಮ ಶಿಷ್ಯ ಪಿಷಾರೊದಿಯವರಿಗೆ ಹೇಳಿದರು.<br>ರಾಮನ್‌ರವರ ಶಿಷ್ಯರಾದ ಪಿಷಾರೊದಿಯವರು ತಾನು ಮಾಡುತ್ತಿರುವ ಸಂಶೋಧನೆಯನ್ನೇ ಕೇಂಬ್ರಿಡ್ಜ್‌ನಲ್ಲಿ ವಿಜ್ಞಾನಿಯೊಬ್ಬ ಮಾಡುತ್ತಿದ್ದಾನೆ. ಅವನ ಬಳಿ ಐದು ಕಿಲೋವಾಟಿನ ಶಕ್ತಿಯುಳ್ಳ X-Ray Tube ಇದೆ ಎಂದು ರಾಮನ್ನರ ಮುಂದೆ ಹೇಳಿದಾಗ (ಗೋಳಿಟ್ಟಾಗ) ನಿನ್ನಲ್ಲಿ ಹತ್ತು ಕಿಲೋವಾಟ್ ಶಕ್ತಿಯ ಬುದ್ಧಿ ಇದೆ. ಅದನ್ನು ಉಪಯೋಗಿಸಿ ಸಂಶೋಧನೆಯನ್ನು ಮುಂದುವರೆಸುತ್ತಾ ಹೋಗು ಎಂದು ನಕ್ಕು ತಮ್ಮ ಶಿಷ್ಯನಿಗೆ ಆತ್ಮವಿಶ್ವಾಸವನ್ನು ತುಂಬಿದರು. | |
| 35. | *“ನೀನು ಸೋತು ಗೆದ್ದೆ ಅಣ್ಣ. ನಾನು ಗೆದ್ದು ಸೋತೆನು.”*<br>ಈ ವಾಕ್ಯವನ್ನು ಸು.ರಂ. ಎಕ್ಕುಂಡಿಯವರು ಬರೆದಿರುವ ‘ಕಥನ ಕವನಗಳು’ ಎಂಬ ಕವನ ಸಂಗ್ರಹದಿಂದ ಆರಿಸಿದ ‘ನನ್ನ ಹಾಗೆಯೆ’ ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಬಾಹುಬಲಿ ಭರತನಿಗೆ ಹೇಳಿದನು.<br>ಭರತ ಚಕ್ರವರ್ತಿಯು ಬಾಹುಬಲಿಯೊಂದಿಗೆ ಹಮ್ಮಿನಲ್ಲಿ ಸೆಣಸಿ ತಮ್ಮನಲ್ಲಿ ಸೋತನು. ಬಾಹುಬಲಿಯು ಗೆದ್ದ ರಾಜ್ಯ ಮರಳಿಸುತ್ತ ‘ನೀನು ಸೋತು ಗೆದ್ದೆ ಅಣ್ಣ ನಾನು ಗೆದ್ದು ಸೋತೆನು ಎಂದು ಹೇಳಿದನು.<br>ಈ ವಾಕ್ಯದಲ್ಲಿ ಕವಿ ಬಾಹುಬಲಿ ತ್ಯಾಗಿಯಾಗುವ ಭವ್ಯ ತತ್ತ್ವವನ್ನು ತಿಳಿಸಿದ್ದಾರೆ. | |
| 36. | ‘ನೀರ ಕಂಡಲ್ಲಿ ಮುಳುಗುವರಯ್ಯ.’<br>ಈ ಮೇಲಿನ ವಾಕ್ಯವನ್ನು ‘ಬಸವಣ್ಣ’ನವರ ವಚನಗಳಿಂದ ಆರಿಸಲಾಗಿದೆ. ವಚನಕಾರರು ಜನರಿಗೆ ತಮ್ಮ ಮೂಢನಂಬಿಕೆಯ ಕುರಿತು ಹೇಳಿದ್ದಾರೆ.<br>ಜೀವನದಲ್ಲಿ ಅಪಚಾರವನ್ನೇ ಮಾಡಿಕೊಂಡು ಬರುತ್ತಿರುವ ಜನರಲ್ಲಿಯ ಮೌಢ್ಯ, ಅಜ್ಞಾನ, ಮೂಢನಂಬಿಕೆಗಳನ್ನು ಖಂಡಿಸುತ್ತಾ, ನೀರಕಂಡಲ್ಲಿ ಮುಳುಗುವರು ಮರವನ್ನು ಕಂಡು ಸುತ್ತುವರು. ಹೀಗೆ ತಮ್ಮ ಪಾಪವನ್ನು ಕಳೆದುಕೊಳ್ಳಲು ಪ್ರಯತ್ನಿಸುವ ಜನರ ಅಜ್ಞಾನ ಮತ್ತು ಕಂದಾಚಾರವನ್ನು ವ್ಯಂಗ್ಯವಾಗಿ ಚಿತ್ರಿಸಿರುವುದನ್ನು ಕಾಣಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | $2 \times 4 = 8$ |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದಬಳಕೆ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾದುದು ಸ್ವಾತಂತ್ರ್ಯ ಬಂದ ಮೇಲೆ. ಒಂದು ಕಡೆ ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿ ಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ ಆರಂಭಿಸಿದ್ದು. ಇನ್ನೊಂದು ಕಡೆ ಅರಣ್ಯ ಹುಟ್ಟುವಳಿಗಳಾದ ಮೆಣಸು, ದಾಲಚಿನ್ನಿ... ಹೀಗೆ ಹಲವಾರು ವಸ್ತುಗಳಿಗೆ ಬೇಡಿಕೆ ಹೆಚ್ಚಾದ್ದರಿಂದ ಹಣದಾಸೆಗೆ ಕಾಡುದೋಚುವವರ ಸಂಖ್ಯೆ ಹೆಚ್ಚಾದದ್ದು. ಇವೆಲ್ಲಕ್ಕಿಂತ ಹೆಚ್ಚಾಗಿ ದೇಶದ ಅಭಿವೃದ್ಧಿಗೆಂದು ಉದ್ದಿಮೆಗಳನ್ನು ಸ್ಥಾಪಿಸಿ ಖನಿಜ, ವಿದ್ಯುತ್ತಿಗೆಂದು ಸರ್ಕಾರವೇ ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕಿದ್ದು. ಕಾಪಾಡಬೇಕಿದ್ದ ಮಾಲೀಕನೇ ತನ್ನ ನೂರು ತೋಳುಗಳಿಂದ ಕಾಡಿಗೆ ಕೊಡಲಿ ಬೀಸಿದ್ದು. ತಾನು ದೋಚುವುದಲ್ಲದೆ, ದೋಚಲು ಸಿದ್ಧರಾದ ಖಾಸಗಿ ಉದ್ದಿಮೆದಾರರನ್ನು ಕರೆದು ಕೊಡಲಿ, ಗುದ್ದಲಿ, ಸಿಡಿಮದ್ದು ನೀಡಿತು. ಹೀಗೆ ಹಲವಾರು ರೀತಿಯಲ್ಲಿ ಪಶ್ಚಿಮ ಘಟ್ಟಗಳ ಪತನ ನಡೆಯುತ್ತಿದೆ.<br><br>***ಅಥವಾ***<br><br>ಸಹಸ್ರಾರು ವರ್ಷಗಳಿಂದ ವಿವಿಧ ಬಗೆಯ ಜೀವಕೋಟಿಗಳಿಗೆ ಆಶ್ರಯ ನೀಡಿದ್ದ ಸಹ್ಯಾದ್ರಿ ಪರ್ವತಗಳು, ಮಾನವನ ಎಡೆಬಿಡದ ಬಳಕೆಯಿಂದಾಗಿ ತನ್ನ ಸಹನೆ ಕಳೆದುಕೊಳ್ಳುತ್ತಿವೆ. ನೋಡ ನೋಡುತ್ತ ನಿರ್ನಾಮವಾಗುತ್ತಿವೆ. ಅರಣ್ಯಗಳನ್ನು ಅತಿಯಾಗಿ ದೋಚಿದ್ದರಿಂದ ಭೂಮಿಯ ಮೇಲಿನ ಮಣ್ಣಿನ ಕವಚ ತೊಳೆದು ಹೋಗುತ್ತಿದೆ. ನೀರಿನ ಮೂಲಗಳಲ್ಲಿ ಹೂಳು ತುಂಬಿ ನೀರಿನ ನಿಕ್ಷೇಪ ಖಾಲಿಯಾಗುತ್ತಿದೆ. ಭೂಮಿಯೊಳಗೆ ನೀರಿಂಗಿಸಬೇಕಾಗಿದ್ದ ಮರಗಳು ಕಡಿಮೆಯಾದುದರಿಂದ ಪ್ರವಾಹದ ಹಾವಳಿ ಹೆಚ್ಚುತ್ತಿದೆ. ಭೂಕುಸಿತ ಅತಿಯಾಗುತ್ತಿದೆ. ಅಂತರ್ಜಲ ಕಡಿಮೆಯಾಗಿ ಬೇಸಗೆಯಲ್ಲಿ ನದಿಗಳು ಬತ್ತತೊಡಗಿವೆ. ವನ್ಯಮೃಗಗಳಿಗೆ ಆಶ್ರಯ ತಪ್ಪಿಹೋಗಿ ಹೊಲ ಗದೆಗಳಿಗೆ ದಾಳಿ ಆರಂಭಿಸಿವೆ. ಎಲ್ಲೋ ಎಲೆಮರೆಯಲ್ಲಿ ಮುದುರಿಕೊಂಡಿದ್ದ ಕ್ಯಾಸನೂರು ರೋಗಾಣುಗಳು ಕಾಡು ಬಿಟ್ಟು ನಾಡಿಗೆ ಹಬ್ಬುತ್ತಿವೆ. ರೋಗಗಳ ಹಾವಳಿ ಹೆಚ್ಚುತ್ತಿದೆ. ಇಂಥ ಕಾಡುಗಳಲ್ಲಿ ಮೇಯಲು ಹೋದ ಗರ್ಭಿಣಿ ಜಾನುವಾರುಗಳ ಗರ್ಭಪಾತ ಹೆಚ್ಚುತ್ತಿದೆ.<br><br>ಪ್ರಕೃತಿಯ ಈ ಸ್ಥಿತಿಯನ್ನು ಯಾರೂ ಲಕ್ಷ್ಯಕ್ಕೆ ತಾರದೆ ಅರಣ್ಯಗಳ ಸೂರೆಯನ್ನು ಮುಂದುವರೆಸಿದಾಗ ಪ್ರಕೋಪ ಹೆಚ್ಚಾಗಿ ಇಡೀ ದಕ್ಷಿಣ ಭಾರತದ ಹವಾಮಾನದ ಏರುಪೇರುಗಳಿಗೆ ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತಗಳಿಗೆ ಕಾರಣವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | ಮಾನವ ಜೀವನ ಶ್ರೇಷ್ಠವಾದುದು. ಬದುಕಿಗೊಂದು 'ಗುರಿ' ಇಲ್ಲದಿದ್ದರೆ ಕಡಲಿನಲ್ಲಿ ಚುಕ್ಕಾಣಿ ಇಲ್ಲದೆ ನೌಕೆಯನ್ನು ನಡೆಸಿದಂತೆ. ಜೀವನದಲ್ಲಿ ಸಾಧ್ಯವಾಗುವಂತಹ ಗುರಿಯನ್ನು ಹೊಂದಿ, ಆ ಗುರಿ ಮುಟ್ಟಲು ಹಗಲಿರುಳು ಶ್ರಮಿಸಬೇಕು. ಕಮಲ ಕೆಸರಲ್ಲಿದ್ದರೂ ತಾನು ಬಾಂದಳವನ್ನು ನೋಡಿ ರವಿಕಿರಣಗಳ ಸಿರಿಗೆ ಅರಳುವುದು. ಹಾಗೆಯೇ ದಾಳಿ ಬಂದಾಗ ಶರಣೆನ್ನುವುದನ್ನು ಬಿಟ್ಟು ಪೌರುಷದ ಹೊನಲೊಳಗೆ ಜೀವನ ಸಾಗಿಸಬೇಕು.<br><br>ಮಾನವನಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರರ ಹಿತಕ್ಕಾಗಿ, ಕರ್ತವ್ಯಪರರಾಗಬೇಕು. ಸ್ವಾರ್ಥದ ಜೊತೆ ಜೊತೆಯಲ್ಲಿಯೇ ಪರಾರ್ಥದಲ್ಲೂ ಜೀವನ ಸಾರ್ಥಕ್ಯವನ್ನು ಕಾಣಬೇಕು. ಸಮಾಜದಿಂದ ನೂರಾರನ್ನು ಪಡೆದ ನಾವು ಅದೇ ಸಮಾಜಕ್ಕೆ ಸ್ವಲ್ಪವಾದರೂ ಮರಳಿ ನೀಡುತ್ತಾ ನಮ್ಮ ಜೀವನ ಸಾರ್ಥಕ್ಯಕ್ಕಾಗಿ ಬಾಳಬೇಕೆಂದು ಕವಿ ಎಂ. ಗೋಪಾಲಕೃಷ್ಣ ಅಡಿಗರು ಹೇಳಿದ್ದಾರೆ.<br><br>***ಅಥವಾ***<br><br>ಗುರಿಯೆಂಬುದು ಪ್ರತಿಯೊಬ್ಬನ ಬದುಕಿಗೂ ಅಗತ್ಯ, ಗುರಿಯಿಲ್ಲದಿದ್ದರೆ ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆ ಇರುವುದಿಲ್ಲ.<br><br>ಕಮಲದ ಹೂ ಕೆಸರಿನ ಮಧ್ಯದಲ್ಲಿದ್ದರೂ ತಾನು ಬಾಂದಳವನ್ನು ನೋಡಿ, ರವಿಕಿರಣಗಳ ಸಿರಿಗೆ ಅರಳುವುದು. ಗಾಳಿ ಬಂದಾಗ ತೂರಿಕೊಳ್ಳುವ ಹೇಡಿತನ, ದಾಳಿ ಬಂದಾಗ ಶರಣೆನ್ನುವುದನ್ನು ಬಿಟ್ಟು ಕೊನೆಯವರೆಗೆ ಪೌರುಷದ ಹೊನಲೊಳಗೆ ಜೀವನವ ಸಾಗಿಸಬೇಕು. ಒಂದು ಬಾಣಕ್ಕೆ ಒಂದೇ ಗುರಿ. ಒಂದು ದೇಹಕ್ಕೆ ಆತ್ಮ ಒಂದೇ. ಹಾಗೆಯೇ ಜೀವನಕ್ಕೂ ಸಾಧ್ಯತೆಯ ಒಂದೇ ಗುರಿ ಇರಬೇಕು. ಮಾನವನಲ್ಲಿ ದೈವತ್ವವನ್ನು, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರರ ಹಿತಕ್ಕಾಗಿ ಕರ್ತವ್ಯ ಪರರಾಗಬೇಕು. ಸ್ವಾರ್ಥದ ಜೊತೆ ಜೊತೆಯಲ್ಲಿಯೇ ಪರಾರ್ಥದಲ್ಲೂ ಜೀವನ ಸಾರ್ಥಕ್ಯವನ್ನು ಕಾಣಬೇಕು. ಸಮಾಜದಿಂದ ನೂರಾರನ್ನು ಪಡೆದ ನಾವು ಅದೇ ಸಮಾಜಕ್ಕೆ ಸ್ವಲ್ಪವಾದರೂ ಮರಳಿ ನೀಡುವುದು ನಮ್ಮ ಜೀವನಶೈಲಿಯಿಂದ ಸಾಧ್ಯವಾಗಬೇಕು ಎಂದು ಹೇಳುತ್ತಾ. ನಮ್ಮ ಬದುಕಿಗೊಂದು ಹೆಗ್ಗುರಿ ಇರಬೇಕು. ಅದನ್ನು ಸಾಧಿಸಲು ಹೋರಾಡುತ್ತಾ ಯಶಸ್ವಿಯಾಗಬೇಕೆಂಬುದನ್ನು 'ಗುರಿ' ಪದ್ಯದಲ್ಲಿ ಅಡಿಗರು ಬಹಳ ಸೊಗಸಾಗಿ ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 39. | (ಸಿ) ಕೃತಘ್ನ | |
| 40. | (ಬಿ) ಗುಣ ಸಂಧಿ | |
| 41. | (ಎ) ಮೂರು | |
| 42. | (ಸಿ) ತ್ರಿಪದಿ | |
| 43. | (ಡಿ) ಬನ | |
| 44. | (ಸಿ) ಕಣಿವೆ | |
| 45. | (ಡಿ) ದಿಗ್ವಾಚಕ | |
| 46. | (ಬಿ) ಧಾತು | |
| 47. | (ಎ) ದ್ವಿರುಕ್ತಿ | |
| 48. | (ಸಿ) ರೂಪಕಾಲಂಕಾರ | |
| 49. | (ಬಿ) ಸಪ್ತಮೀ | |
| 50. | (ಡಿ) ಕೆಂದಾವರೆ | |
| | **ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 4 × 1 = 4 |
| 51. | "ನನ್ನ ತಾಯೀ, ಓ ನನ್ನ ತಾಯೀ", ಎಂದು ಕೂಗುತ್ತಿದ್ದ ರಾಜ ಭರತ. | |
| 52. | "ನನ್ನ ಹೊಗೆಯನ್ನು ಕಳಿಸಿ ಹುಡುಕಿಸಿ ಬಿಡುತ್ತೇನಯ್ಯ ರಾಜಕುಮಾರ ಅಳಬೇಡಪ್ಪ" ಎಂದಿತು. | |
| 53. | ಭಾರತೀಯರು ಜೇನುತುಪ್ಪದ ಬಣ್ಣದವರು. | |
| 54. | ಪ್ರಾಣಿಗಳೂ–ಪಕ್ಷಿಗಳೂ ಸುತ್ತ ನಿಂತು ಕಣ್ಣೀರನ್ನು ಸುರಿಸಿದವು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 55. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 56. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | **ಅಥವಾ** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |
| 57. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ, ಭಾಷಾಶೈಲಿಗೆ | 2 ಅಂಕಗಳು |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |